# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ:1 ನೇ ಉಪ ವಿಭಾಗ, ಬೆಂಗಳೂರು ರವರ ಕಛೇರಿ, ನಂ.55,
ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020, ದೂರವಾಣಿ- 23464114

ಸಂ: ಕಕೊಅಮ/ಸಕಾನಿಅ-1/ಗೋವಿಂದರಾಜನಗರ/ಪಿ.ಎಂ.ಎ.ವೈ-ಹೆಚ.ಎಫ್.ಎ-1845/2019-20/261

ದಿನಾಂಕ: 21.09.2019

ರಿಗೆ,

ಕಾರ್ಯಪಾಲಕ ಅಭಿಯಂತರರು
ನಂ.1ನೇ ವಿಭಾಗ,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು.

ಮಾನ್ಯರೇ,

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ 6 ಕೊಳಚೆ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 1845 (ಜಿ.ಎಪ್) ಮನೆಗಳ ನಿರ್ಮಾಣ ಕಾಮಗಾರಿಯ ಬಗ್ಗೆ.

ಉಲ್ಲೇಖ:01) ಕಾರ್ಯಾದೇಶ ಸಂಖ್ಯೆ: NO.KSDB/COMMR/ID-2/PMAY-HFA/Phase-3 /WO/2017-18/83 Date:25.05.2018.

02) ಕಾಮಗಾರಿಯ ಸ್ಥಳವನ್ನು ಹಸ್ಥಾಂತರಿಸಿದ ದಿನಾಂಕ:01.06.2018

03) ತಮ್ಮ ಕಛೇರಿ ಪತ್ರ ಸಂಖ್ಯೆ: ಕಕೊಅಮ/ಕಾಪಾಅ/ಬೆಂ.ವಿ-1/PMAY-HFA / ಗೋವಿಂದರಾಜನಗರ -1845/2019-20/414, ದಿನಾಂಕ:21.09.2019

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ 6 ಕೊಳಚೆ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 1845 (ಜಿ.ಎಪ್) ಮನೆಗಳ ನಿರ್ಮಾಣ ಕಾಮಗಾರಿಗೆ ಉಲ್ಲೇಖಿತ ಪತ್ರ (1) ರಲ್ಲಿ ಮೆ: ಗೌರಿ ಇನ್ಫ್ರಾ ಇಂಜಿನಿಯರ್ಸ್ ಪ್ರೈ ಲಿಮಿಟೆಡ್ ಬೆಂಗಳೂರು ರವರಿಗೆ ರೂ.104,88,25,000/-ಗಳಿಗೆ ಗುತ್ತಿಗೆ ವಹಿಸಲಾಗಿರುತ್ತದೆ. ಹಾಗೂ ಗುತ್ತಿಗೆ ಕರಾರಿನಂತೆ 24 ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಗುತ್ತಿಗೆದಾರರಿಗೆ ಮಂಡಳಿಯಿಂದ ದಿನಾಂಕ:01.06.2018 ರಂದು ಕಾಮಗಾರಿಯನ್ನು ನಿರ್ವಹಿಸುವಂತೆ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರ ಮಾಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪ್ರಾರಂಬಿಸಲು ಮುಂದಾದಾಗ ಅನುಮೋದಿತ ಫಲಾನುಭವಿಗಳು ತಮ್ಮ ಗುಡಿಸಲುಗಳನ್ನು ತೆರವುಗೊಳಿಸಿರುವುದಿಲ್ಲ ಹಾಗೂ ಫಲಾನುಭವಿ ವಂತಿಕೆ ಪಾವತಿಸಲು ಸಮ್ಮತಿಸಿರುವುದಿಲ್ಲ.

ಮುಂದುವರೆದಂತೆ ಸದರಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯು 3ನೇ ಹಂತವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ರೂ.3.50 ಲಕ್ಷ ಮತ್ತು ಇತರೆ ವರ್ಗದವರಿಗೆ ರೂ.2.70 ಲಕ್ಷಗಳು ಅನುದಾನವು ಲಭ್ಯವಿದ್ದು ಉಳಿಕೆ ಮೊತ್ತವನ್ನು ಫಲಾನುಭವಿಗಳಿಂದ ಪ್ರಾರಂಭಿಸಲು ಬ್ಯಾಂಕ್‌ಸಾಲ ಮತ್ತು ಕಾರ್ಮಿಕ ಇಲಾಖೆಯಿಂದ ಸಾಲ ಪಡೆಯುವ ಅವಶ್ಯಕತೆಯಿರುವುದರಿಂದ ಬ್ಯಾಂಕ್ ಮತ್ತು ಕಾರ್ಮಿಕ ಇಲಾಖೆಯಿಂದ ಸದರಿ ಸೌಲಭ್ಯವು ದೊರಕಿರುವುದಿಲ್ಲ. ಆದ್ದರಿಂದ ಕಾಮಗಾರಿ ಪ್ರಾರಂಬಿಸಲು ಸಾದ್ಯವಾಗಿರುವುದಿಲ್ಲ. ಮೇಲ್ಕಂಡ

Scanned with CamScanner

ಕಾರಣಗಳಿಂದಾಗಿ ಗುತ್ತಿಗೆದಾರರು ಯಾವುದೇ ಕಾಮಗಾರಿಯನ್ನು ಪ್ರಾರಂಬಿಸಿರುವುದಿಲ್ಲ. ಆದ್ದರಿಂದ ಟೆಂಡರ್ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತಾ, ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ನಂ.1ನೇ ಉಪವಿಭಾಗ, ಕಕೊಅಮ,
ಬೆಂಗಳೂರು

CS Scanned with CamScanner